No. of Printed Pages : **6**

# 6846

*Register Number* | | | | | | |

# Language – Part IV – KANNADA

(Poetry, Prose and Grammar)

Time Allowed : 2½ Hours ] [ Maximum Marks : 100

**ಸೂಚನೆಗಳು :** (1) ಪ್ರಶ್ನೆಪತ್ರಿಕೆ ಮುದ್ರಣ ಸ್ವಚ್ಛವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ವಚ್ಛತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.

(2) ಬರೆಯಲು ಮತ್ತು ಅಡ್ಡಗೆರೆ ಎಳೆಯಲು ನೀಲಿ ಅಥವಾ ಕಪ್ಪು ಶಾಹಿಯನ್ನು ಬಳಸಿರಿ ಹಾಗೂ ಆಕೃತಿಗಳನ್ನು ರಚಿಸಲು ಪೆನ್ಸಿಲ್ ಬಳಸಿರಿ.

(3) ಉತ್ತರಗಳು ಸ್ಪಷ್ಟವಾಗಿದ್ದು, ಕೊಟ್ಟಿರುವ ಸಾಲುಗಳ ಮಿತಿಯನ್ನು ಮೀರದಂತಿರಬೇಕು.

## ಭಾಗ – ಅ
## PART - A

**I.** **(a)** ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : **11x1=11**

Answer the following questions by choosing the suitable answer :

**1.** ಮಹಾಕವಿ ಪಂಪನು __________ ಶತಮಾನದಲ್ಲಿದ್ದನು.

(ಅ) 11 ನೇ ಶತಮಾನ (ಆ) 12 ನೇ ಶತಮಾನ

(ಇ) 10 ನೇ ಶತಮಾನ (ಈ) 9 ನೇ ಶತಮಾನ

**2.** ಬಸವಣ್ಣನ ಹುಟ್ಟೂರು __________.

(ಅ) ತಾಳವಾಡಿ (ಆ) ಬಾಗೇವಾಡಿ (ಇ) ನಾಗವಾಡಿ (ಈ) ಚೋಳವಾಡಿ

**3.** ವೈದ್ಯರ ಪತ್ನಿಯ ಹೆಸರು __________.

(ಅ) ರತ್ನಾ (ಆ) ಸೀತಾ ರತ್ನಾ (ಇ) ರಮಾಬಾಯಿ (ಈ) ಸುಶೀಲಾ

**4.** ಚಿಪ್ಕೋ ಪದವು __________ ಭಾಷೆಯ ಪದ.

(ಅ) ಗುಜರಾತಿ (ಆ) ಮರಾಠಿ (ಇ) ಹಿಂದಿ (ಈ) ರಾಜಸ್ಥಾನಿ

**5.** ಪಂಡಿತ ಭೀಮಸೇನ ಜೋಶಿಯವರ ತಂದೆ __________.

(ಅ) ಗುರುರಾಜ ಜೋಶಿ (ಆ) ಜಿ.ಬಿ. ಜೋಶಿ

(ಇ) ಚಾಂದಖಾನ (ಈ) ರಾಮಸೇನ ಜೋಶಿ

[ Turn over

www.careerindia.com

CAREERINDIA



(b) ಬಿಟ್ಟ ಸ್ಥಳ ತುಂಬಿರಿ :
Fill in the Blanks :

6. ವಿದ್ಯೆ ಕಲಿಸದ ತಂದೆ __________ ಹೇಳದ ಗುರುವು.

7. ಕಲ್ಲನಾಗರ ಕಂಡರೆ __________ ಎಂಬರು.

(c) ಹೊಂದಿಸಿ ಬರೆಯಿರಿ :
Match the following :

| | | |
|---|---|---|
| 8. ಬಕಾಸುರ ವಧೆ | - | ನಾ. ಮೊಗಸಾಲೆ |
| 9. ಮೂರು ಗಂಟೆಗಳು | - | ಎಚ್.ಆರ್. ಕೃಷ್ಣಮೂರ್ತಿ |
| 10. ನಾನು ಪ್ರೀತಿಸುತ್ತೇನೆ | - | ಕುಮಾರವ್ಯಾಸ |
| 11. ಚಿಪ್ಕೋ ಚಳುವಳಿ | - | ಅ.ರಾ. ಮಿತ್ರ |

## ಭಾಗ – ಆ
## PART - B

II. (a) ಕೊಟ್ಟಿರುವ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಮಾತ್ರ ಸಂಕ್ಷಿಪ್ತವಾಗಿ ಉತ್ತರಿಸಿರಿ : **4x2=8**
From the following questions answer **any four** questions briefly :

12. ಕರ್ಣನು ಏನೆಂದು ಪ್ರತಿಜ್ಞೆ ಮಾಡುತ್ತಾನೆ ?

13. ಎಂತಹವರನ್ನು ಕೂಡಲಸಂಗಮದೇವನು ಮೆಚ್ಚುವುದಿಲ್ಲ ?

14. ವಿಶಾಲಪುರದಲ್ಲಿ ದಾನವನಿಗೆ ಊಟ ಕೊಡುವ ಕ್ರಮ ಹೇಗಿತ್ತು ?

15. ಸ್ವರ್ಗದಲ್ಲಿ ಯಾವುದು ಇರುವುದಿಲ್ಲ ?

16. ಸಿಪಾಯಿಗಳು ಯೇಸುವನ್ನು ಶಿಲುಬೆಗೆ ಏರಿಸಿದ ಸಂದರ್ಭವನ್ನು ತಿಳಿಸಿ.

17. ಕವಿಗೆ ಯಾವುದು ಉಸಿರು ? ಯಾವುದು ತಾಯಿ ?

(b) ಈ ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಮಾತ್ರ ಸಂಕ್ಷಿಪ್ತವಾಗಿ ಉತ್ತರಿಸಿರಿ : **4x2=8**
From the following questions answer **any four** questions briefly :

18. ಹಾವನ್ನು ಕಂಡಾಗ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿದವು ?

19. ಕಂಟ್ರಾಕ್ಟರ್ ಮರ ಕಡಿಯಲು ಬಂದಾಗ ಹಳ್ಳಿಯವರು ಏನು ಮಾಡಿದರು ?

20. ಜೋಶಿಯವರು ಯಾವ್ಯಾವ ರಾಗ ಕಲಿತರು ?

21. ಮನೋರಮೆಯು ಮುದ್ದಣನನ್ನು ಹೇಗೆ ಉಪಚರಿಸಿದಳು ?

22. ಆರ್ಕಿಮಿಡೀಸನು ಎಲ್ಲಿ ಗಣಿತಶಾಸ್ತ್ರವನ್ನು ಕಲಿತನು ?

23. ತಬ್ಬಲಿರಾಯನು ನೀರಿನ ಕೊಳ, ಹಾಲಿನ ಕೊಳಗಳಲ್ಲಿ ಏನು ಮಾಡಿದ ?

www.careerindia.com

CAREERINDIA



(c) ಈ ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಮಾತ್ರ ಸಂಕ್ಷಿಪ್ತವಾಗಿ ಉತ್ತರಿಸಿರಿ : 4x2=8
From the following questions answer **any four** questions briefly :

24. ವೇಣು ಲಲಿತಳನ್ನು ಮದುವೆಯಾದುದು ಹೇಗೆ ?

25. 'ವಿಕ್ರಮ ಬೇತಾಳ'ವನ್ನು ಬೇಂದ್ರೆ ಯಾವುದಕ್ಕೆ ಹೋಲಿಸಿದ್ದಾರೆ ?

26. ಚಂಡಮಾರುತಗಳು ದೊಡ್ಡ ಹಡಗುಗಳಿಗೂ ಯಮಪ್ರಾಯ ಹೇಗೆ ? ವಿವರಿಸಿರಿ.

27. ಚಂಡಮಾರುತ ಯಾವಾಗ ತನ್ನ ಶಕ್ತಿಯನ್ನು ಕಳೆದುಕೊಳ್ಳುತ್ತದೆ ?

28. ಹಸಿರು ವನಗಳ ನಡುವೆ ಬಸ್ಸು ಹೇಗೆ ಸಂಚರಿಸಿತು ?

29. ಮೌಲ್ವಿಯ ಕೈಯಲ್ಲಿ ಕುಮಾರವ್ಯಾಸ ಭಾರತವನ್ನು ಕಂಡಾಗ ಲೇಖಕರ ಮನಸ್ಸಿನಲ್ಲಿ ಉಂಟಾದ ಭಾವನೆಯೇನು ?

(d) ಕೊಟ್ಟಿರುವ ಪ್ರಶ್ನೆಗಳಲ್ಲಿ **2** ಕ್ಕೆ ಮಾತ್ರ ವಿವರವಾಗಿ ಉತ್ತರಿಸಿರಿ : 2x5=10
From the following questions answer **any two** questions in detail :

30. ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದರೂ ನಾವು ಸಮಾಧಾನಿಯಾಗಿರಬೇಕು ಏಕೆ ? ವಿವೇಚಿಸಿ.

31. ಭೀಮನಿಗೂ ಬಕಾಸುರನಿಗೂ ನಡೆದ ಹೋರಾಟವನ್ನು ವರ್ಣಿಸಿ.

32. ಯೇಸು ಮರಣ ಹೊಂದಿದ ಸನ್ನಿವೇಶವನ್ನು ಬಣ್ಣಿಸಿ.

33. ನಿನ್ನೆದೆಯ ದನಿಯೆ ಋಷಿ, ಮನು ನಿನಗೆ ನೀನು ಎಂಬುದರ ಭಾವಾರ್ಥವೇನು ?

(e) ಕೊಟ್ಟಿರುವ ಪ್ರಶ್ನೆಗಳಲ್ಲಿ **2** ಕ್ಕೆ ಮಾತ್ರ ವಿವರವಾಗಿ ಉತ್ತರಿಸಿರಿ : 2x5=10
From the following questions answer **any two** questions in detail :

34. ಭೀಮನಾಯಕನು ವೈದ್ಯರ ಒಡವೆಗಳನ್ನು ಒಪ್ಪಿಸಿದ ಪ್ರಸಂಗವನ್ನು ವಿವರಿಸಿ.

35. ಮುದ್ದಣ ಮತ್ತು ಮನೋರಮೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ.

36. ಪರೀಕ್ಷೆಯ ಕಾಲದಲ್ಲಿ ಮಾತ್ರ ವಿದ್ಯಾರ್ಥಿಗಳಿಗೆ ದೈವಭಕ್ತಿ ಹೆಚ್ಚು – ಸಮರ್ಥಿಸಿ.

37. ಶಕುಂತಲೆಯನ್ನು ಗಂಡನ ಮನೆಗೆ ಕಳುಹಿಸುವಾಗ ಕಣ್ವ ಋಷಿಗಳಿಗಾದ ಕಳವಳವನ್ನು ಚಿತ್ರಿಸಿ.

[ Turn over

www.careerindia.com

CAREERINDIA



(f) ಕೊಟ್ಟಿರುವ ಪದ್ಯಗಳಲ್ಲಿ **ಯಾವುದಾದರೊಂದನ್ನು** ಪೂರ್ಣಗೊಳಿಸಿರಿ : 1x5=5
Complete **any one** of the following parts of the poems :

38. (ಅ) ನಡೆವುದೊಂದೇ ......................
.............................................
.................................. ಸರ್ವಜ್ಞ.

**ಅಥವಾ**

(ಆ) ಕನ್ನಡ ಸನ್ಮಾನ ......................
.............................................
.............................................
........................ ವೇನಗದೆ ಕಿರೀಟ.

## ಭಾಗ – ಇ
## PART - C

III. (a) ಕೊಟ್ಟಿರುವ **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿರಿ : 12x1=12
Answer **all** the questions given below :

39. 'ರಾಮ' – ಈ ಪದದ ಲಿಂಗವನ್ನು ಹೆಸರಿಸಿ.

40. 'ಶಾಲೆಯಲ್ಲಿ' – ಈ ಪದವನ್ನು ಬಿಡಿಸಿ ಬರೆಯಿರಿ.

41. 'ಪಕ್ಷಿ' – ಈ ಪದದ ತದ್ಭವ ರೂಪ ಬರೆಯಿರಿ.

42. 'ಸ್ಫೂರ್ತಿ' – ಈ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.

43. 'ಬೆಟ್ಟಕ್ಕೆ ಜಿಂಕೆ ಜಿಗಿಯಿತು' – ಈ ವಾಕ್ಯದಲ್ಲಿನ ಗೆರೆ ಎಳೆದ ಪದದ ವಿಭಕ್ತಿಯನ್ನು ಹೆಸರಿಸಿ.

44. 'ಸೀತೆಯು ಊರಿಗೆ ಹೋದಳು' – ಈ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.

45. ಗಿರೀಶನು ಚಿತ್ರವನ್ನು ಬಿಡಿಸಿದನು ಅಂದವಾಗಿ ಗಣಪತಿಯ – ಈ ವಾಕ್ಯವನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಬರೆಯಿರಿ.

46. ಕಿಶೋರ್ ಮೈಸೂರಿಗೆ ಹೋಗುತ್ತಿದ್ದಾನೆ – ಈ ವಾಕ್ಯವನ್ನು ಭೂತಕಾಲಕ್ಕೆ ಪರಿವರ್ತಿಸಿ.

www.careerindia.com

CAREERINDIA



47. ಗಾಯತ್ರಿಯು ಪಾತ್ರೆಯನ್ನು ತೊಳೆದನು – ಈ ವಾಕ್ಯದಲ್ಲಿನ ತಪ್ಪನ್ನು ಸರಿಪಡಿಸಿ ಬರೆಯಿರಿ.

48. 'ಕುಂಭ ಸಂಭವ' – ಈ ಹೆಸರು ಯಾರಿಗಿದೆ ?

49. ಚೌಪದಿಯಲ್ಲಿನ ಸಾಲುಗಳ ಸಂಖ್ಯೆ ಎಷ್ಟು ?

50. ಆಹಾ ಸಮುದ್ರದ ಅಲೆಗಳು ಗಗನದತ್ತ ಚಿಮ್ಮುತ್ತಿವೆ – ಈ ವಾಕ್ಯಕ್ಕೆ ಲೇಖನ ಚಿಹ್ನೆಗಳನ್ನು ಹಾಕಿರಿ.

(b) ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ 4** ಕ್ಕೆ ಮಾತ್ರ ಉತ್ತರಿಸಿರಿ. **4x2=8**
Answer **any four** questions from the following :

51. ಸಂಸ್ಕೃತ ಸ್ವರ ಸಂಧಿಗಳು ಯಾವುವು ? ಹೆಸರಿಸಿರಿ.

52. ಆದಿಯೊಳವರಂ ಪಿರಿದೊಂ – ಈ ಸಾಲಿಗೆ ಪ್ರಸ್ತಾರ ಹಾಕಿರಿ.

53. ನೂರಾರು, ಶತಾಧಿಪತಿ – ಈ ಪದಗಳನ್ನು ಬಿಡಿಸಿ ಸಂಧಿ ತಿಳಿಸಿರಿ.

54. ಹೆಬ್ಬಾವು, ಮುಕ್ಕಾಲು – ಈ ಪದಗಳನ್ನು ಬಿಡಿಸಿ ಬರೆದು ಸಮಾಸವನ್ನು ಹೆಸರಿಸಿರಿ.

55. ಉಪಮಾಲಂಕಾರವನ್ನು ಉದಾಹರಣೆಯೊಂದಿಗೆ ವಿವರಿಸಿರಿ.

56. ವಾಕ್ಯಗಳಲ್ಲಿ ಎಷ್ಟು ವಿಧ ? ಅವು ಯಾವುವು ?

## ಭಾಗ – ಈ
## PART - D

IV. 57. ಕೊಟ್ಟಿರುವ ವಿಷಯವನ್ನು ಕುರಿತು ಕಿರು ಪ್ರಬಂಧ ಬರೆಯಿರಿ : (ಒಂದಕ್ಕೆ ಮಾತ್ರ) **1x5=5**
Write a short essay on **any one** of the following :
(ಅ) ಹವ್ಯಾಸಗಳು (ಆ) ಜಲಮಾಲಿನ್ಯ

58. ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವವನ್ನು ಬಣ್ಣಿಸಿ ಗೆಳೆಯನಿಗೊಂದು ಪತ್ರ ಬರೆಯಿರಿ. **1x5=5**

**ಅಥವಾ**

ನಿಮ್ಮ ಊರಿಗೊಂದು ಗ್ರಂಥಾಲಯ ಬೇಕೆಂದು ವಿನಂತಿಸಿ ಸಂಬಂಧಪಟ್ಟ ಅಧಿಕಾರಿಗೆ ಅರ್ಜಿಯೊಂದನ್ನು ಬರೆಯಿರಿ.

[ Turn over

www.careerindia.com

CAREERINDIA



**59.** ಈ ಕೆಳಗಿನ ಗದ್ಯಭಾಗವನ್ನು ಓದಿ, ನೀಡಲಾದ ಪ್ರಶ್ನೆಗಳಿಗೆ ಉತ್ತರಿಸಿರಿ : **5x1=5**

Read the following passage and answer the given questions :

ಜನಪದ ಸಾಹಿತ್ಯವು ನಮ್ಮ ಜೀವನದ ಉಸಿರು. ಈ ಸಾಹಿತ್ಯವನ್ನು ರಚಿಸಿದವರು ಜನಸಾಮಾನ್ಯರು. ಅವರ ನೋವು–ನಲಿವುಗಳು, ಸುಖ–ದುಃಖಗಳು, ಬದುಕಿನ ಏರುಪೇರುಗಳು ಇವುಗಳ ವಿಶಿಷ್ಟ ಅನುಭವಗಳ ಕನ್ನಡಿಯಾಗಿ ನಿಂತಿದೆ ಜನಪದ ಸಾಹಿತ್ಯ. 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್' ಎನಿಸಿದ ಕನ್ನಡ ನಾಡವರು ತಮ್ಮ ಜೀವನದ ಸಿಹಿ ಕಹಿ ಅನುಭವಗಳನ್ನು ಸಾಹಿತ್ಯದಲ್ಲಿ ತೋಡಿಕೊಂಡಿದ್ದಾರೆ. ಜನಪದ ಸಾಹಿತ್ಯದಲ್ಲಿ ಕತೆಗೆ ಪ್ರಮುಖ ಸ್ಥಾನವಿದೆ. ಕತೆಗಳು ಕರ್ಣಾಕರ್ಣಿಯಾಗಿ ಅಂದರೆ ಒಬ್ಬರ ಕಿವಿಯಿಂದ ಮತ್ತೊಬ್ಬರ ಕಿವಿಗೆ ಹರಿದು ಬಂದವುಗಳು.

ಈ ಜನಪದ ಕತೆಗಳನ್ನು ನಮ್ಮ ಹಳ್ಳಿಯ ಜನ ಪುಟ್ಟ ಮಕ್ಕಳಿಗೆ, ಕಿರಿಯರಿಗೆ ಅತ್ಯಂತ ಆಸಕ್ತಿಯಿಂದ ಹೇಳುತ್ತಿದ್ದರು. ಯಾವುದೇ ವಿಷಯವನ್ನಾಗಲೀ ಶಾಶ್ವತವಾಗಿ ಮನಃಪಟಲದಲ್ಲಿ ನಿಲ್ಲಿಸಬೇಕಾದರೆ ಕತೆಯ ಮೂಲಕ ತಿಳಿಸಿದರೇನೇ ಸಾಧ್ಯವಾಗುತ್ತದೆ. ಮಕ್ಕಳ ಕಲ್ಪನಾಶಕ್ತಿಯನ್ನು ಹಾಗೂ ನೆನಪಿನ ಶಕ್ತಿಯನ್ನು ಬೆಳೆಸಲು ಇಂತಹ ಜನಪದ ಕತೆಗಳು ಅತ್ಯಂತ ಸಹಕಾರಿಯಾಗುತ್ತವೆ.

**ಪ್ರಶ್ನೆಗಳು :**

(1) ಜನಪದ ಸಾಹಿತ್ಯವನ್ನು ರಚಿಸಿದವರು ಯಾರು ?

(2) ಯಾವುದರ ಕನ್ನಡಿಯಾಗಿ ಜನಪದ ಸಾಹಿತ್ಯ ನಿಂತಿದೆ ?

(3) ಜನಪದ ಸಾಹಿತ್ಯದಲ್ಲಿ ಯಾವುದಕ್ಕೆ ಪ್ರಮುಖ ಸ್ಥಾನವಿದೆ ?

(4) ಹಳ್ಳಿಯ ಜನ ಕತೆಗಳನ್ನು ಯಾರಿಗೆ ಆಸಕ್ತಿಯಿಂದ ಹೇಳುತ್ತಿದ್ದರು ?

(5) ಮಕ್ಕಳ ಯಾವ ಶಕ್ತಿಯನ್ನು ಬೆಳೆಸಲು ಜನಪದ ಕತೆಗಳು ಅತ್ಯಂತ ಸಹಕಾರಿಯಾಗಿವೆ ?

**60.** (a) ಆಂಗ್ಲ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ : **3**

Translate the English passage into Kannada language.

India is our country. Many religions such as Hindu, Islam, Christianity, Jainism, Buddhism are followed in our country. We speak different languages also. Unity in Diversity is our motto.

(b) ಈ ಕೆಳಗಿನ ಆಂಗ್ಲ ಗಾದೆಗಳಿಗೆ ಸರಿಯಾದ ಕನ್ನಡ ಗಾದೆಗಳನ್ನು ಬರೆಯಿರಿ. **2**

Write suitable proverbs in Kannada to the given English proverbs.

(i) Work is Worship

(ii) Prevention is better than cure

- o O o -

www.careerindia.com